# ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ

**ಸಿ.ಸಿ ಸಂಖ್ಯೆ.*ನಂ.1643/2024***

**ಫಿರ್ಯಾಧಿದಾರಃ** ಸರಕಾರದ ಪರವಾಗಿ ಚಿಂಚೋಳಿ ಪೋಲಿಸ ಠಾಣೆ

// ವಿರುದ್ದ //

**ಆರೋಪಿ** : ಬಾಬುಪಟೇಲ ಮತ್ತು ಇನ್ನೋಬ್ಬ

ಆ ರೋ ಪ ಣೆ

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ**,** ಈ ಕೆಳಕೆಂಡ ಆರೋಪಿತರು**.**

| | |
|---|---|
| 1. | ಬಾಬುಪಟೇಲ ತಂದೆ ಬಾಬುಪಟೇಲ ಹೊಸಳ್ಳಿ,<br>48 ವರ್ಷ, ಉಃ ಒಕ್ಕಲುತನ, ವಾಸಃ ನಾಗಾಯಿದಲಾಯಿ,<br>ತಾಃ ಚಿಂಚೋಳಿ. |
| 2. | ನಸೀಮಾಬೇಗಂ ಗಂಡ ಬಾಬು ಪಟೇಲ ಹೊಸಳ್ಳಿ,<br>40 ವರ್ಷ, ಉಃ ಮನೆ ಕೆಲಸ, ವಾಸಃ ನಾಗಾಯಿದಲಾಯಿ,<br>ತಾಃ ಚಿಂಚೋಳಿ. |

**ಆದ ನಿಮ್ಮ ವಿರುದ್ದ ದೋಷಿಸುವ ಆರೋಪಣೆ ಎನೆಂದರೆ,**

ದಿನಾಂಕಃ 16-06-2024 ರಂದು 01-30 ಗಂಟೆಯ ಸುಮಾರಿಗೆ ಚಿಂಚೋಳಿ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ನಾಗಾಯಿದಲಾಯಿ ಗ್ರಾಮದಲ್ಲಿ ಚಾಸಾ-1 ಶ್ರೀಮತಿ ಶಾಹೇದಾ ಬೇಗಂ ನೇದ್ದವಳು ತಮ್ಮ ಹೊಲದಲ್ಲಿ ಕಟ್ಟಿಗೆ ಆಯುತ್ತಿರುವಾಗ ಆರೋಪಿತರು ಬಂದು ತಡೆದು ನಿಲ್ಲಿಸಿದ ಕಾರಣ, ಈ ಮೂಲಕ ಭಾ.ದಂ.ಸಂ.ಕಲಂ.341 ಸಹವಾಚಕ ಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

2. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರಾದ ನೀವು ಚಾಸಾ-1 ನೇದ್ದವಳ ಹೊಲದಲ್ಲಿ ಅತಿಕ್ರಮ ಪ್ರವೇಶ ಮಾಡಿದ ಕಾರಣ, ಈ ಮೂಲಕ ಭಾ.ದಂ.ಸಂ.ಕಲಂ.447 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

3. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಬಾಬುಪಟೇಲ 1ನೇ ಆರೋಪಿ ನೀನು ಚಾಸಾ-1 ನೇದ್ದವಳಿಗೆ ಏ ರಂಡಿ ನಮ್ಮ ಹೊಲದಲ್ಲಿ ಇರುವ ಪೈಪುಗಳು ಸುಟ್ಟಿದ್ದೀ ಭೋಸಡಿ ಅಂತಾ ಮತ್ತು ನಸೀಮಾಬೇಗಂ 2ನೇ ಆರೋಪಿ ಏ ಛೀನಾಲ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಈ ಮೂಲಕ ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

4. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ನಸೀಮಾಬೇಗಂ 2ನೇ ಆರೋಪಿ ಚಾಸಾ-1 ನೇದ್ದವಳಿಗೆ ಕೈಯಿಂದ ಕುತ್ತಿಗೆ ಹಿಡಿದು ಕಾಲಿನಿಂದ ತೊಡೆ ಮೇಲೆ ಒದ್ದಿದ್ದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 323 ಸಹವಾಚ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

5. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ನಸೀಮಾಬೇಂಗ 2ನೇ ಆರೋಪಿ ನೀನು ಚಾಸಾ-1 ನೇದ್ದವಳಿಗೆ ಈ ರಂಡಿಗೆ ಬಿಡಬೇಡ ಹೊಡೆದು ಖಲಾಸ ಮಾಡು ಅಂತಾ ಜೀವ ಬೆದರಿಕೆ ಹಾಕಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ 34 ರಡಿಯಲ್ಲಿ

ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ ಅರ್ಥವಾಯಿತು

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?
ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 14.02.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.